**ಪಿ ಡಬ್ಲ್ಯೂ 1**

**(ಇಂದು ದಿಃ 27.01.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಎಸ್ ಬಿ ಬಿ ವಕೀಲರಿಂದ,**

ನನ್ನ ಮನೆಯು ಸೂಸಗಡಿ ಗ್ರಾಮದ ಜಾಲಿಯಲ್ಲಿರುತ್ತದೆ. ದಾವಾ ಆಸ್ತಿಯು ಇರುವುದು ತಲಗೋಡು ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ನಿಮ್ಮ ಮನೆಯಿಂದ ದಾವಾ ಆಸ್ತಿಯು ಎಷ್ಟು ದೂರ ಎಂಬ ಪ್ರಶ್ನೆಗೆ ಸಾಕ್ಷಿಯು 1 ಕಿ.ಮೀ ಮಾತ್ರ ಎಂದು ನುಡಿಯುತ್ತಾರೆ.

ಈ ದಾವೆಯನ್ನು ನಾನು 2021 ನೇ ಸಾಲಿನಲ್ಲಿ ದಾಖಲಿಸಿರುತ್ತೇನೆ. 2021 ನೇ ಸಾಲಿನಲ್ಲಿ ದಾವಾ ಆಸ್ತಿಯ ಒಟ್ಟು ಮೌಲ್ಯ ಎಷ್ಟು ಇರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ತಂದೆಯು ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ ಅಂತಾ ಹೇಳುವ ಸಮಯದಲ್ಲಿ ನೀವು ಅಪ್ರಾಯಸ್ಥರಾಗಿದ್ರಿ ಎಂದರೆ ಸರಿ. ಸದ್ರಿ ಕ್ರಯಪತ್ರದ ಆಧಾರದ ಮೇಲೆ ನಿಮ್ಮ ತಂದೆಯವರ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದಾಗಿದ್ದು ಇದೆಯೋ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ದಿನಾಂಕ 30.03.1985 ನೇ ಸಾಲಿನಿಂದ 2013 ನೇ ಸಾಲಿನವರೆಗೆ ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ನಿಮ್ಮ ತಂದೆಯವರ ಹೆಸರು ನಮೂದಾಗಿರುವುದಿಲ್ಲ ಎಂದರೆ ಸರಿ. ನಾವು ನಮ್ಮ ತಂದೆಯವರ ಹೆಸರಿಗೆ ಪಹಣಿ ವರ್ಗಾವಣೆಯಾಗಬೇಕು ಅಂತಾ ತಹಶೀಲ್ದಾರರವರ ಕಚೇರಿಯಲ್ಲಿ ಅರ್ಜಿಯನ್ನು 2012-13 ನೇ ಸಾಲಿನಲ್ಲಿ ನೀಡಿರುತ್ತೇವೆ. ಸದ್ರಿ ಅರ್ಜಿಯನ್ನು ಸಲ್ಲಿಸುವ ದಿನಾಂಕದವರೆಗೂ ಪ್ರತಿವಾದಿಗಳ ಹೆಸರು ಪಹಣಿಯಲ್ಲಿ ಕಂಡುಬರುತ್ತಿತ್ತು. ಪ್ರತಿವಾದಿಗಳ ಹೆಸರು ಪಹಣಿಯಲ್ಲಿ ನಮೂದಾದ ಬಗ್ಗೆ ನನಗೆ ಮೊದಲ ಬಾರಿ ತಿಳಿದಿದ್ದು 2012-13 ನೇ ಸಾಲಿನಲ್ಲಿ ಆಗಿರುತ್ತದೆ. 2012-13 ನೇ ಸಾಲಿನಿಂದ ಈ ದಿನದವರೆಗೂ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯು ಪ್ರತಿವಾದಿಗಳ ಹೆಸರಿನಲ್ಲಿಯೂ ನಡೆದುಕೊಂಡು ಬಂದಿರುತ್ತದೆ.

ದಾವಾ ಆಸ್ತಿಯು ಕೃಷಿ ಜಮೀನು ಆಗಿರುತ್ತದೆ. 1985 ನೇ ಸಾಲಿನಲ್ಲಿ ನಿಮ್ಮ ತಂದೆಯವರ ಹೆಸರಿಗೆ ಬೇರೆ ಕೃಷಿ ಜಮೀನು ಇತ್ತೋ ಎಂಬ ಪ್ರಶ್ನೆಗೆ ಸಾಕ್ಷಿಯು ಇರಲಿಲ್ಲ. ನಮ್ಮ ಮನೆ ಇರುವಂತೆ ಆಸ್ತಿ ಮಾತ್ರ ಇತ್ತು ಎಂದು ನುಡಿಯುತ್ತಾರೆ. ನನಗೆ ನಮ್ಮ ತಂದೆಯವರು

2013 ನೇ ಸಾಲಿನಲ್ಲಿ ಮೊಕ್ತಾರನಾಮೆಯನ್ನು ನೀಡಿ ಅವರು ದುಬೈನಲ್ಲಿ ನೆಲೆಸಿರುತ್ತಾರೆ. ಮೊಕ್ತಾರನಾಮೆಯನ್ನು ನೀಡುವ ಕಾಲಕ್ಕೆ ನಿಮಗೆ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳಲ್ಲಿ ಪ್ರತಿವಾದಿಯ ಹೆಸರು ಇರುವ ಬಗ್ಗೆ ನಿಮಗೆ ಮಾಹಿತಿ ಇತ್ತು ಎಂದರೆ ಸಾಕ್ಷಿಯು ಹೌದು. ಸಾಕ್ಷಿಯು ಮುಂದುವರೆದು ನಾವು ಪ್ರತಿವಾದಿಗಳನ್ನು ಕರೆಸಿ ಈ ವಿಚಾರದ ಬಗ್ಗೆ ಚರ್ಚಿಸಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಪ್ರತಿವಾದಿಗಳಿಗೆ ಲಿಖಿತವಾದ ನೋಟಿಸ ಏನಾದರೂ ನೀಡಿದ್ದು ಇದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲಾ. ನಾವು ಮೌಖಿಖವಾಗಿ ತಿಳಿಸಿರುತ್ತೇವೆ ಎನ್ನುತ್ತಾರೆ. ನಮ್ಮ ತಂದೆ ನನಗೆ ಮೊಕ್ತಾರನಾಮೆಯನ್ನು ನೀಡಿದ್ದು ದಾವಾ ಆಸ್ತಿಗಳ ಬಗ್ಗೆ ವಿಚಾರಗಳನ್ನು ನೋಡಿ ನಡೆಸುವ ಸಲುವಾಗಿ ಇರುತ್ತದೆ.

ನೀವು 2013 ನೇ ಸಾಲಿನಲ್ಲಿ ಮೊಕ್ತಾರನಾಮೆಯನ್ನು ಪಡೆದುಕೊಂಡು ಈ ದಾವೆಯನ್ನು ದಾಖಲಿಸಿದ್ದೀರಿ ಹೊರತು ಬೇರೆ ಯಾವುದೇ ಕಾರ್ಯವನ್ನು ನೀವು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ. ನಾನು ಸಹಾಯಕ ಆಯುಕ್ತರ ಕಚೇರಿಯಲ್ಲಿ ವಿಚಾರಣೆಗೆ ಹಾಜರು ಆಗಿರುತ್ತೇನೆ ಎನ್ನುತ್ತಾರೆ. ಸಹಾಯಕ ಆಯುಕ್ತರ ಕಚೇರಿಯಿಂದ ನಮಗೆ ಯಾವುದೇ ಲಿಖಿತ ಆದೇಶವನ್ನು ನೀಡದ ಕಾರಣ ನಾನು ನ್ಯಾಯಾಲಯದಲ್ಲಿ ಹಾಜರಪಡಿಸಿರುವುದಿಲ್ಲ. ಮೊಕ್ತಾರನಾಮೆಯನ್ನು ಬರೆಸುವ ಕಾಲಕ್ಕೆ ದಾವಾ ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ನನ್ನ ಮುಂದೆ ಇತ್ತು. ಮೊಕ್ತಾರನಾಮೆಯನ್ನು ಬರೆಸಿ ಕೊಡುವಂತ ಕಾಲಕ್ಕೆ ನಿಮ್ಮ ತಂದೆಯವರಿಗೆ ಪ್ರತಿವಾದಿಗಳ ಹೆಸರು ಪಹಣಿ ಪತ್ರಿಕೆಯಲ್ಲಿ ಇರುವುದರ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನಿಮ್ಮ ತಂದೆಯವರ ಬಳಿ ದಾವಾ ಆಸ್ತಿಯನ್ನು ಖರೀದಿಸಿದ್ದ ಕಾಲಕ್ಕೂ, 2013 ನೇ ಸಾಲಿನಲ್ಲೂ ಅಥವಾ ಈಗಲೂ ಕೂಡಾ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-5 ರ 3 ನೇ ಪ್ಯಾರಾದಲ್ಲಿ ನಿಮ್ಮ ತಂದೆಯವರು ಮೊಕ್ತಾರನಾಮೆಯನ್ನು ನಿಮಗೆ ನೀಡುವಾಗ ಅವರ ಬಳಿ ಕಬ್ಜಾ ಇಲ್ಲದೇ ಇರುವುದರಿಂದ ಅದನ್ನು ಪಡೆಯುವ ಸಲುವಾಗಿ ಕೂಡಾ ನಿಮಗೆ ನಿಪಿ-5 ನ್ನು ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿ. ನಾನು ನಿಪಿ-5 ರ ಆಧಾರದ ಮೇಲೆ ನನ್ನ ತಂದೆಯವರ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ಕ್ರಯ ಪತ್ರದ ಆಧಾರದ

ಮೇಲೆ ನಮೂದಿಸುವಂತೆ ಸಹಾಯಕ ಆಯುಕ್ತರ ಕಚೇರಿಯಲ್ಲಿ ಅರ್ಜಿಯನ್ನು ನೀಡುರುತ್ತೇನೆ. ಅದಕ್ಕೆ ಸಂಬಂಧಿಸಿ ದಾಖಲಾತಿ ಇದೆಯೋ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾನು ಸಹಾಯಕ ಆಯುಕ್ತರ ಕಚೇರಿಯಲ್ಲಿ ನೀಡಿದ ಅರ್ಜಿಯ ಪ್ರತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೀನೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ-5 ರಲ್ಲಿ ಪ್ಯಾರಾ 15 ರಲ್ಲಿ ನಮೂದಿಸಿದ ಅಧಿಕಾರವನ್ನು ಉಪಯೋಗಿಸಿ ನಾನು ಕಾರ್ಯವನ್ನು ಮಾಡಿರುತ್ತೇನೆ. ಅದಕ್ಕೆ ಸಂಬಂಧಿಸಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೀನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಮ್ಮ ತಂದೆಯವರು ದಾವಾ ಆಸ್ತಿಯನ್ನು ಖರೀದಿಸಿದ ಕಾಲದಿಂದಲೂ ಈ ದಿನದವರೆಗೂ ನಿಮ್ಮದಾಗಲೀ, ನಿಮ್ಮ ತಂದಯವರದ್ದಾಗಲೀ ಹೆಸರು ಪಹಣಿ ಪತ್ರಿಕೆಯಲ್ಲಿ ನಡೆದುಕೊಂಡು ಬಂದಿರುವುದಿಲ್ಲ ಮತ್ತು ಈ ದಿನದವರೆಗೆ ನೀವಾಗಲೀ, ನಿಮ್ಮ ತಂದೆಯವರಾಗಲೀ ದಾವಾ ಆಸ್ತಿಯನ್ನು ಕಬ್ಜಾ ಮಾಡಿ ಅನುಭವಿಸಿಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ಮೊಕ್ತಾರನಾಮೆಯನ್ನು ಮೂರು ಆಸ್ತಿಗಳಿಗೆ ಸಂಬಂಧಿಸಿ ನೀಡಲಾಗಿರುತ್ತದೆ. ನಿಪಿ-5 ರಲ್ಲಿ ಯಾವ ಗ್ರಾಮದ ಆಸ್ತಿಗಳು ಎಂದು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸೂಸಗಡಿಯಲ್ಲಿ ಇರುವಂತ ಆಸ್ತಿಯು ನಮ್ಮ ಮನೆಯಾಗಿರುತ್ತದೆ. ನಾವು ಯಾವುದೇ ಕಂದಾಯವನ್ನು ದಾವಾ ಆಸ್ತಿಗೆ ಸಂಬಂಧಿಸಿ ಕಟ್ಟಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿ ಪ್ರತಿವಾದಿಗಳ ನಡುವೆ ಒಂದು ಪಾಲುಪಾರಿಕತ್ವದ ದಾವೆ ನಡೆದಿತ್ತು ಎಂದರೆ ಸರಿ. ಸದ್ರಿ ವಿಚಾರ ನನಗೆ 2013-14 ನೇ ಸಾಲಿನಲ್ಲಿ ತಿಳಿದಿರುತ್ತದೆ. ನಿಮಗೆ ಈ ವಿಚಾರವು ತಿಳಿದು ನೀವು ಮೇಲ್ಮನವಿಯನ್ನು ಸಲ್ಲಿಸಿರುತ್ತೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲಾ ಎಂದು ನುಡಿಯುತ್ತಾರೆ. ಸದ್ರಿ ದಾವೆಯ ತೀರ್ಪಿನ ವಿರುದ್ಧ ನೀವು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಈ ದಾವೆ ಸದ್ರಿ ಡಿಕ್ರಿಯನ್ನು ಪ್ರಶ್ನಿಸುತ್ತಾ ದಾಖಲಿಸಿರುತ್ತೇವೆ ಎಂದು ನುಡಿಯುತ್ತಾರೆ.

ಈ ದಾವೆಯ ಬಗ್ಗೆ ನಿಮ್ಮ ತಂದೆಯವರಿಗೆ ಹೆಚ್ಚು ಮಾಹಿತಿ ಇರುತ್ತದೆ ಎಂದರೆ ಸಾಕ್ಷಿಯು ನಮ್ಮ ತಂದೆಯವರು ಖರೀದಿಸಿದ ಕಾಲಕ್ಕೆ ಅವರಿಗೆ ಹೆಚ್ಚು ಮಾಹಿತಿ ಇರುತ್ತದೆ ಮತ್ತು ಈ ದಾವೆಯ ಬಗ್ಗೆಯು ಕೂಡಾ ಅವರಿಗೆ ಮಾಹಿತಿ ಇರುತ್ತದೆ ಎನ್ನುತ್ತಾರೆ. ದಾವಾ ಆಸ್ತಿಯ

ಖರೀದಿ ಪತ್ರವು ಯಾವಾಗ ಬರೆಯಲಾಗಿರುತ್ತದೆ ಎಂಬುದರ ಬಗ್ಗೆ ನಿಮಗೆ ಮಾಹಿತಿ ಇದೆಯೋ ಎಂದರೆ ಸಾಕ್ಷಿಯು ನಾನು ಹುಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಖರೀದಿ ಪತ್ರವನ್ನು ನೋಡಿ ನಿಮಗೆ ದಾವಾ ಆಸ್ತಿಯ ಖರೀದಿಯ ಬಗ್ಗೆ ಮಾಹಿತಿ ಕಲೆಹಾಕಿಕೊಂಡಿರುತ್ತೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು. ಸದ್ರಿ ಖರೀದಿ ಪತ್ರಕ್ಕೆ ಸಂಬಂಧಿಸಿದ ಬಾಂಡ್ ಪೇಪರಗಳನ್ನು ಯಾವ ಯಾವ ತಾರೀಖಿನಂದು ಖರೀದಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಖರೀದಿ ಪತ್ರವನ್ನು ಯಾರು ದಸ್ತಕ್ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನೀವು ಹೇಳುವಂತೆ ನಿಮ್ಮ ತಂದೆಯವರಿಗೆ ಲಚ್ಮಯ್ಯ ಆಗಲೀ, ಜಟ್ಟಪ್ಪನಾಗಲೀ, ಕರಿಯಪ್ಪನಾಗಲೀ ದಸ್ತಾವೇಜನ್ನು ಬರೆದುಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಅವರು ನಿಮ್ಮ ತಂದೆಯವರಿಗೆ ಬರೆದುಕೊಡದ ಕಾರಣ ಈಗಲೂ ಕೂಡಾ ದಾವಾ ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳು ಅವರ ಹೆಸರಿನಲ್ಲಿಯೇ ನಡೆದುಕೊಂಡು ಬಂದಿರುತ್ತವೆ ಎಂದರೆ ಸರಿಯಲ್ಲ. ನಿಮ್ಮ ತಂದೆಯವರ ಬಳಿ ಖರೀದಿ ಕಾಲದಿಂದ ಈ ದಿನದವರೆಗೂ ಕಬ್ಜಾ ಇಲ್ಲದ ಕಾರಣ 2013 ನೇ ಸಾಲಿನಲ್ಲಿ ನಿಪಿ-5 ನ್ನು ನಿಮಗೆ ಬರೆದುಕೊಟ್ಟು ಬಲಾತ್ಕಾರವಾಗಿ ಕಬ್ಜಾವನ್ನು ಪಡೆದುಕೊಳ್ಳಲು ಹೇಳಿರುತ್ತಾರೆ ಎಂದರೆ ಸರಿಯಲ್ಲ.

ಲಚ್ಮಯ್ಯ ಮತ್ತು ಜಟ್ಟ ರವರು ಮರಣ ಹೊಂದಿರುತ್ತಾರೆ. ಲಚ್ಮಯ್ಯ ಮತ್ತು ಜಟ್ಟ ನವರ ಮರಣಾನಂತರ ಅವರ ಮಕ್ಕಳು ನ್ಯಾಯಾಲಯದಲ್ಲಿ ದಾವೆಯನ್ನು ದಾಖಲಿಸಿ ಅವರ ಪಾಲಿಗೆ ಆಸ್ತಿಯನ್ನು ಮಾಡಿಸಿಕೊಂಡಿರುತ್ತಾರೆಂದರೆ ಸರಿ. ಜಟ್ಟಪ್ಪ ಎನ್ನುವವರು ಪ್ರತಿವಾದಿಗಳ ಕುಟುಂಬಸ್ಥನೇ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ನಮೂದಿಸಿದ ಮಾರಾಟಗಾರರು ನಿಮ್ಮ ತಂದೆಯವರಿಗೆ ಮಾರಾಟ ಮಾಡಿರುವುದಿಲ್ಲ ಅದೊಂದು ಖೊಟ್ಟಿ ದಾಖಲಾತಿಯಾಗಿರುತ್ತದೆ ಎಂದರೆ ಸರಿಯಲ್ಲ.

ನಿಪಿ-4 ರಲ್ಲಿ ನಮೂದಿಸಿದ ವಿಚಾರ ತಪ್ಪಾಗಿರುತ್ತದೆ ಎಂದು ನಿಮ್ಮ ತಂದೆಯವರಿಗೆ ಗೊತ್ತಾಗಿದ್ದರಿಂದ ಪಹಣಿ ಪತ್ರಿಕೆಗಳಲ್ಲಿ ಅವರ ಹೆಸರನ್ನು ದಾಖಲಿಸಿಕೊಳ್ಳಲು ಯಾವುದೇ ಪ್ರಯತ್ನ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ರ ಆಧಾರದ ಮೇಲೆ ನೀವು ಎಂದೂ ಕೂಡಾ ಕಬ್ಜಾ ವಹಿವಾಟಿಯನ್ನು ಮಾಡದ ಕಾರಣ ಈ ದಿನದವರೆಗೂ ಪ್ರತಿವಾದಿಗಳು

ಕಬ್ಜಾ ವಹಿವಾಟಿಯನ್ನು ಮಾಡಿಕೊಂಡು ದಾವಾ ಆಸ್ತಿಯನ್ನು ಅನುಭವಿಸಿಕೊಂಡು ಇರುತ್ತಾರೆ ಎಂದರೆ ಸರಿಯಲ್ಲ. 2013 ನೇ ಸಾಲಿನಲ್ಲಿ ನಿಮಗೆ ಪ್ರತಿವಾದಿಗಳ ನಡುವೆ ದಾವಾ ಆಸ್ತಿಗಳಿಗೆ ಸಂಬಂಧಿಸಿ ಪಾಲುಪಾರಿಕತ್ವವಾದ ಬಗ್ಗೆ ತಿಳಿದಿತ್ತು ನೀವು ಆ ಸಂದರ್ಭದಲ್ಲಿ ಯಾವುದೇ ಪ್ರಶ್ನೆಯನ್ನು ಮಾಡದೇ 2021 ರಲ್ಲಿ ವಿಳಂಬವಾಗಿ ದಾವೆಯನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

ನೀವು ಈ ವಿಚಾರವನ್ನು ತಿಳಿದರೂ ಕೂಡಾ ಯಾವುದೇ ನ್ಯಾಯಾಲಯದಲ್ಲಿ ಮತ್ತು ಸಹಾಯಕ ಆಯುಕ್ತರ ಕಚೇರಿಯಲ್ಲಿ ಯಾವುದೇ ಅರ್ಜಿಯನ್ನು ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 13 ಎನ್ನುವವರು ನಿಪಿ–4 ರಲ್ಲಿ ಪಕ್ರಗಾರರಾಗಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ 1 ರವರು ನಿಮ್ಮ ತಂದೆಯವರಿಗೆ ನಿಪಿ–4 ನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನೀವು ಕೋರಿದಂತೆ ಯಾವುದೇ ಪರಿಹಾರಕ್ಕೆ ನೀವು ಅರ್ಹರಲ್ಲಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**